**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5005 /2026**

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | : | ಪೂಜಾ | **ಪ್ರಮಾಣ ವಚನ ಭೋಧಿಸಿದ ದಿನಾಂಕ** | |
| **ತಂದೆ ಹೆಸರು** | : | ಅಪಿಲ್.ಪಿ | 03.06.2026 | |
| **ವಯಸ್ಸು** | : | 18 ವರ್ಷ | | |
| **ವೃತ್ತಿ** | : | ವಿದ್ಯಾರ್ಥಿ | **ಪ್ರಾ.ಸಾಃ** | 2 |
| **ವಾಸ ಸ್ಥಳ** | : | ಜಾಗೇರಿ ಆರ್.ಬಿ ತಾಂಡ | **ಚಾ.ಸಾಃ** | 2 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ 1 ನನ್ನ ತಾಯಿ. ಚಾಸಾ 3 ನನ್ನ ತಾತ. ಚಾಸಾ 6 ನನ್ನ ಅಜ್ಜಿ. ಆರೋಪಿ ನನ್ನ ದೊಡ್ಡಪ್ಪ. ದಿಃ 12.06.2025 ರಂದು ಬೆಳಗ್ಗೆ 8.00 ಗಂಟೆ ಸಮಯದಲ್ಲಿ ನಾನು ನನ್ನ ಮನೆಯ ಮುಂದೆ ಇದ್ದಾಗ, ಚಾಸಾ 1 ರವರು ಆರೋಪಿಗೆ ನಮ್ಮ ಮನೆಯ ಬಳಿ ಬಹಿರ್ದೆಸೆಗೆ ಹೋಗಬೇಡಿ ಎಂದು ಆರೋಪಿಗೆ ಹೇಳಿದಾಗ, ಆರೋಪಿಯು ಚಾಸಾ 1 ರವರನ್ನು ಕುರಿತು ಕೆಟ್ಟ ಪದಗಳಿಂದ ಮಾತನಾಡಿದನು. ಅಕ್ಕಪಕ್ಕದ ಮನೆಯವರು ಬಂದು ಜಗಳ ಬಿಡಿಸಿದರು. ಮರುದಿನ ಬೆಳಗ್ಗೆ ನಾನು ಮನೆಯ ಒಳಗೆ ಇದ್ದಾಗ ಆರೋಪಿಯು ಚಾಸಾ 1 ರವರೊಂದಿಗೆ ಜಗಳ ಮಾಡುತ್ತಿದ್ದನು. ನಾನು ಮನೆಯಿಂದ ಹೊರಗೆ ಬಂದಾಗ, ಆರೋಪಿಯು ಚಾಸಾ 1 ರವರಿಗೆ ನೀನು ಒಬ್ಬಳೇ ಇದ್ದಿಯಾ ಎಂದು ಹೇಳಿ ಚಾಸಾ 1 ರವರ ಕತ್ತನ್ನು ಹಿಸುಕಿದನು ಮತ್ತು ಚಾಸಾ 1 ರವರಿಗೆ ಚಪ್ಪಲಿಯಿಂದ ಮೈ ಕೈಗೆ ಹೊಡೆದನು. ನಾನು ಜಗಳ ಬಿಡಿಸಲು ಹೋದಾಗ, ಆರೋಪಿಯು ನನ್ನ ಕೂದಲು ಹಿಡಿದು ಎಳೆದಾಡಿ ನನಗೆ ಕೈಗಳಿಂದ ಬೆನ್ನಿಗೆ

ಹೊಡೆದನು. ಆ ಸಮಯಕ್ಕೆ ಚಾಸಾ 3 ರವರು ಜಗಳ ಬಿಡಿಸಲು ಬಂದಾಗ ಆರೋಪಿಯು ಅವರನ್ನೂ ತಳ್ಳಿ ಕೆಳಕ್ಕೆ ಬಿಳಿಸಿದನು. ಅಕ್ಕಪಕ್ಕದ ಮನೆಯವರು ಜಗಳ ಬಿಡಿಸಿದರು. ಚಾಸಾ 4 ಮತ್ತು 5 ರವರು ಜಗಳ ಬಿಡಿಸಿರುತ್ತಾರೆ. ನಂತರ ಆರೋಪಿಯು ನಮ್ಮ ಬಳಿ ದೊಣ್ಣೆಯನ್ನು ಎಸೆದನು. ಆರೋಪಿಯು ಸ್ಥಳದಿಂದ ಹೋಗುವಾಗ ನಮಗೆ ಕೊಲೆ ಬೆದರಿಕೆ ಹಾಕಿ ಹೋದನು. ನಾನು, ಚಾಸಾ 1 ಮತ್ತು 3 ರವರು ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದೆವು. ಆಸ್ಪತ್ರೆಯಲ್ಲಿ ಪೋಲಿಸರು ಬಂದು ಚಾಸಾ 1 ರವರಿಂದ ಹೇಳಿಕೆ ಪಡೆದುಕೊಂಡರು. ಪೋಲೀಸರು ಘಟನೆ ಬಗ್ಗೆ ನನ್ನನ್ನು ವಿಚಾರಣೆ ಮಾಡಿದರು. (ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೊಳ್ಳೇಗಾಲ ರವರಿಂದ ಬಂದ ಮುಚ್ಚಿದ್ದ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು.) ಹೇಳಿಕೆಯನ್ನು ನಿಪಿ 2 ಎಂದು, ಸಾಕ್ಷಿ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಚಪ್ಪಲಿ ಮತ್ತು ದೊಣ್ಣೆಯನ್ನು ಮು.ಮಾ 1 ಮತ್ತು 2 ಎಂದು ಈಗಾಗಲೇ ಗುರುತಿಸಲಾಗಿದೆ.

**ಪಾಟೀ ಸವಾಲುಃ- ಶ್ರೀ ಬಿ.ಎಸ್.ಆರ್ ವಕೀಲರಿಂದ**

ನಮ್ಮ ಮತ್ತು ಆರೋಪಿಯ ನಡುವೆ ಹಲವು ವರ್ಷಗಳಿಂದ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ಆದರೆ ಸ್ವಲ್ಪ ವರ್ಷಗಳಿಂದ ಮಾತುಕತೆ ಇರುವುದಿಲ್ಲ. ಚಾಸಾ 3 ರವರು ಘಟನೆ ಸಮಯದಲ್ಲಿ ನಡೆದಾಡುತ್ತಿದ್ದರು. ಆದರೆ ಈಗ 6 ತಿಂಗಳಿನಿಂದ ಅವರಿಗೆ ಪಾಶ್ವವಾಯು ಆಗಿರುತ್ತದೆ. ಚಾಸಾ 3 ರವರು ಹಲವು ವರ್ಷಗಳಿಂದ ಓಡಾಡುತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮೊಮ್ಮಕ್ಕಳು ತೋಟದಲ್ಲಿ ಗಲೀಜು ಮಾಡುತ್ತಾರೆ ಎಂದು ಚಾಸಾ 1 ರವರು ಗಲಾಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ನನ್ನಗಾಗಲೀ ಚಾಸಾ 1 ರವರಿಗಾಗಲೀ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಆರೋಪಿಯೊಂದಿಗೆ ಮನೆ ಖಾಲಿ ಮಾಡಿಸುವ ವಿಚಾರದಲ್ಲಿ ಮತ್ತು ನಿವೇಶನದ ವಿಚಾರದಲ್ಲಿ ಆಗಾಗ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಯಾವುದೇ ಘಟನೆ ಆಗದೇ ಇದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮಾತು ಕೇಳಿಕೊಂಡು ನಾನು ಆರೋಪಿಯ ವಿರುದ್ದ ಸುಳ್ಳು

ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 12.06.2025 ರಂದು ಮತ್ತು 13.06.2025 ರಂದು ನಾನು ತೋಟದ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಮು.ಮಾ 1 ಮತ್ತು 2 ಅನ್ನು ನಾನು ಮತ್ತು ಚಾಸಾ 1 ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ